(SRI B. N. BORANNA GOWDA.)

Mysore State for the year 1954-55 and 1955-56 ;

(i) the number of village workers, (ii) men and (iii) women ;

(*b*) out of these appointments, the number of men and women who are appointed from Bellary District.

A.—Dr. R. NAGAN GOWDA (Minister for Agriculture).—

(*a*) For the year 1954-55 ... 70
For the year 1955-56 ... 75

All the 145 Village Level Workers are men.

(*b*) Three men.

ಶ್ರೀ ಬಿ. ಎಸ್. ಬೋರಣ್ಣಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸಮಾಡುವುದಕ್ಕೆ ಹೆಂಗಸರನ್ನು ನೇಮಕ ಮಾಡಿಲ್ಲವೇ ?

ಡಾ॥ ಆರ್. ನಾಗನಗೌಡ.—ವಿಲೇಜ್ ಲೆವೆಲ್ ವರ್ಕರ್ಸ್ ಜೊತೆಗೆ ಸೋಷಿಯಲ್ ಎಜುಕೇಷನ್ ಆರ್ಗನೈಸರ್ಸ್ ಇದ್ದಾರೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಸೋಷಿಯಲ್ ಸರ್ವಿಸ್ ಇದೆಯಲ್ಲ ಅದನ್ನು ಇದರ ಜೊತೆಗೆ ಸೇರಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಸೋಷಿಯಲ್ ಎಜುಕೇಷನ್ ಆರ್ಗನೈಜರ್ಸ್ ಇದರಲ್ಲಿದ್ದಾರೆ. ಪ್ರಶ್ನೆಯಲ್ಲಿ ವಿಲೇಜ್ ಲೆವೆಲ್ ವರ್ಕರ್ಸ್ ಎಂದು ಕೇಳಿದ್ದಕ್ಕಾಗಿ ಸೋಷಿಯಲ್ ಎಜುಕೇಷನ್ ಆರ್ಗನೈಜರ್ಸ್ ವಿಷಯ ಹೇಳಿಲ್ಲ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಬಳ್ಳಾರಿ ಜಿಲ್ಲೆಯಿಂದ ಮೂರು ಜನಗಳನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ್ದೀರಿ. ಒಂದು ಜಿಲ್ಲೆಗೆ ಮೂರು ಜನರು ಸಾಕೇ ?

ಡಾ॥ ಆರ್. ನಾಗನಗೌಡ.—ಈ ರೀತಿ ನೇಮಕ ಮಾಡುವಾಗ ಜಿಲ್ಲಾವಾರು ವಿಂಗಡಿಸುವುದಿಲ್ಲ ಅರ್ಜಿಗಳನ್ನು ನೋಡಿ ಅದರೊಳಗೆ ರಾಯಭ್ಯಾದವರು ಯಾರು ಎಂದು ನೋಡಿಕೊಂಡು ಆರಿಸುತ್ತೇವೆ. ಜಿಲ್ಲೆಗಳಿಗೆ ಅಥವಾ ಬೇರೊಂದು ವಿಧವಾಗಿ ಹಂಚಿಕೆ ಮಾಡುವುದಕ್ಕೆ ಹೋದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ರಾಷ್ಟ್ರೀಯ ವಿಸ್ತರಣಾ ಯೋಜನೆ ಕೆಲಸಕ್ಕೆ ಬಳ್ಳಾರಿಗೆ ಹೋಗಿ ಅಲ್ಲಿ ಕೆಲಸ ಮಾಡುವುದಕ್ಕೆ ಬಹಳ ತೊಂದರೆಯಾಗುವುದನ್ನು ಯೋಚನೆ ಮಾಡಿ, ಅಲ್ಲಿಯವರನ್ನೇ ಆ ಕೆಲಸಕ್ಕೆ ನೇಮಿಸುವ ವಿಷಯವನ್ನು ಯೋಚನೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಅಲ್ಲಿಗೆ ಹೋಗುವಾಗ ತೊಂದರೆ ಎಂದು ಹೇಳಿ ಅಲ್ಲಿಗೆ ಹೋದನಂತರ ಸುಖವಾಗಿರುತ್ತೇವೆ ಎಂದು ಹೇಳಿರುತ್ತಾರೆ.

Sri T. MARIYAPPA.—May I know the number of appointments made in N.E.S. Blocks other than at village levels ?

Dr. R. NAGAN GOWDA.—Here village level workers are given. There are other appointments made. There are seven men and seven ladies for 1955-56. These are all new appointments. Then there are others like the Agricultural Supervisors and Co-operative Inspectors that have been posted there. Since they happen to be permanent Government servants, they are not considered as fresh appointments.

N. E. S. Scheme for Belur, Saklespur and Alur Taluks.

Q.—70. Sri H. K. SIDDAIYA Scheduled Castes).—

Will the Government be pleased to state :—

(*a*) whether it has come to their notice that the three taluks, *viz.*, Belur Saklespur and Alur are very backward taluks ;

(*b*) whether resolutions and questions had not been tabled last year urging them to extend the National Extension Scheme to these three taluks :

(*c*) whether they have tried to extend the National Extension Scheme to these three taluks during the current year and whether they would do this ?

A.—Dr. R. NAGAN GOWDA (Minister for Agriculture).—

(*a*) These three taluks being in Malnad have got the disabilities common to all Malnad areas.

(*b*) Yes.

(*c*) The needs of all the areas are considered by Government when each selection is made.

ಶ್ರೀ ಎಚ್. ಕೆ. ಸಿದ್ದಯ್ಯ.—ಮುಂದಿನ ವರ್ಷ ಅಂದರೆ 1-4-56ರಿಂದ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ದೇಶದಲ್ಲಿ ಕೆಲವು ತಾಲ್ಲೂಕುಗಳಲ್ಲಿ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಮಾಡುತ್ತಲೇ ಇದ್ದೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಸಂದರ್ಭದಲ್ಲಿ ಮಲೆನಾಡಿಗೆ ಸೇರಿರುವ ಆಲೂರು, ಬೇಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಯಾವುದನ್ನಾದರೂ ತೆಗೆದುಕೊಳ್ಳುತ್ತೀರಾ ?

ಡಾ॥ ಆರ್. ನಾಗನಗೌಡ.—ಈ ವಿಷಯವನ್ನು ಎಲ್ಲ ತಾಲ್ಲೂಕುಗಳೂ ಮತ್ತು ಜಿಲ್ಲೆಗಳನ್ನೂ ಕೂಡಿಸಿ ಯೋಚನೆ ಮಾಡಬೇಕಾಗಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ತಾಲ್ಲೂಕುಗಳು ಬಹಳ ಹದಗಟ್ಟಿವೆ, ಅದನ್ನು ಸರಿಪಡಿಸಬೇಕಾದರೆ

ಈ ರಾಷ್ಟ್ರೀಯ ವಿಸ್ತರಣಾ ಯೋಜನೆ ಬಹಳ ಮುಖ್ಯವಾದದ್ದು ಎಂದು ಮೂರು ವರ್ಷಗಳಿಂದ ಕೇಳುತ್ತಿದ್ದೇವೆ. ಅದುವರಿಂದ ಈ ಮೂರು ತಾಲ್ಲೂಕುಗಳಲ್ಲಿ ಯಾವುದಾದರೂ ಒಂದೆರಡು ತಾಲ್ಲೂಕುಗಳಲ್ಲಿಯಾದರೂ ಈ ಕೇಂದ್ರಗಳನ್ನು ಸ್ಥಾಪನೆಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಈಗ ಮಲೆನಾಡು ಮತ್ತು ಮೈದಾನ ಪ್ರದೇಶಗಳಲ್ಲಿ ಬೇರೆ ವಾತಾವರಣ ವಿದೆ. ಅಷ್ಟೇ ಹೊರತು ಹದಗೆಟ್ಟಿದೆ ಎಂದು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಇಡೀ ಮೈಸೂರು ದೇಶದಲ್ಲಿರುವ ಎಲ್ಲ ತಾಲ್ಲೂಕುಗಳನ್ನೂ ತೆಗೆದುಕೊಳ್ಳಬೇಕೆಂದು ಏರ್ಪಾಡು ಮಾಡಿಕೊಂಡಿದ್ದೇವೆ. ತಾವು ಹೇಳಿರುವ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡು ಮುಂದಿನ ವರ್ಷ ಯೋಚನೆ ಮಾಡುತ್ತೇವೆ.

ಶ್ರೀ ಹೆಚ್. ಕೆ. ಸಿದ್ದಯ್ಯ.—ಜ್ಞಾಪಕದಲ್ಲಿಟ್ಟುಕೊಂಡು ಯೋಚನೆ ಮಾಡುತ್ತೀವೆಂದರೆ ನಮ್ಮ ಕೆಲಸ ವಾಗಲಿಲ್ಲ. ತಾವು ಖಂಡಿತವಾಗಿಯೂ ಆಲೂರು, ಬೇಲೂರು, ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಯಾವುದನ್ನಾದರೂ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡಬೇಕು.

Mr. SPEAKER.—That is no question.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ರಾಷ್ಟ್ರೀಯ ವಿಸ್ತರಣೆ ಯೋಜನೆಯನ್ನು ಮುಂದಿನವರ್ಷ ನಮ್ಮ ತಾಲ್ಲೂಕುಗಳಿಗೆ ಕೊಡುವ ಯೋಚನೆ ಸರ್ಕಾರಕ್ಕೆ ಇದೆ ಎಂದು ನಾನು ನಂಬಬೇ ?

ಡಾ॥ ಆರ್. ನಾಗನಗೌಡ.—ಈ ವರ್ಷದಲ್ಲಿ ಮೈಸೂರು ದೇಶದಲ್ಲಿ ಎಲ್ಲ ತಾಲ್ಲೂಕುಗಳಿಗೂ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಕೊಡುವಾಗ ಈ ತಾಲ್ಲೂಕುಗಳನ್ನೂ ಗಮನದಲ್ಲಿಟ್ಟುಕೊಂಡು ಯಾವುಯಾವುದಕ್ಕೆ ಕೊಡಬೇಕು ಎಂದು ತೀರ್ಮಾನ ಮಾಡುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಮೂರು ವರ್ಷಗಳಿಂದಲೂ ತಮ್ಮನ್ನು ಬೇಡಿಕೊಳ್ಳುತ್ತಿರುವ ನಮಗೆ ಈ ಸಲ ಈ ಯೋಜನೆಯ ಅನುಕೂಲ ದೊರೆಯುತ್ತದೆ ಎಂದು ನಂಬಬೇ ?

ಡಾ॥ ಆರ್. ನಾಗನಗೌಡ.—ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದೇವೆ.

1 P.M.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ರಾರಂಭವಾಗುವಾಗ ಸಕಲೇಶಪುರ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಪ್ರಾರಂಭ ಮಾಡಬೇಕೆಂದು ಶಿಫಾರ್ಸು ಮಾಡಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಆ ಸಮಾಚಾರ ಈಗ ನನ್ನಲ್ಲಿಲ್ಲ. ಮೊದಲು ಅಂದರೆ ಯಾವಾಗ ಎಂದು ಹೇಳಿದರೆ ವಿಚಾರ ಮಾಡಬಹುದು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಇದುವರೆಗೆ ಆ ತಾಲ್ಲೂಕುಗಳಿಗೆ ಕೊಡದಿರುವುದರಿಂದ ಮುಂದಾದರೂ ಕೊಡಲು ಯೋಚನೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಎಲ್ಲ ಸಂದರ್ಭಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ಅದನ್ನು ವಿಚಾರ ಮಾಡಿ ಯಾವ ತಾಲ್ಲೂಕುಗಳಿಗೆ ಕೊಡಬೇಕೆಂಬುದನ್ನು ತೀರ್ಮಾನ ಮಾಡುತ್ತೇವೆ.

QUESTIONS FOR ANSWERS ON THE DAY

(But not taken up).

Technical School for Tumkur.

Q.—275. Sri Mali MARIYAPPA (Pavagada).—

Will the Government be pleased to state :—

(*a*) whether there have been representations to locate a technical school at Tumkur ?

(*b*) the progress so far made by Government to fulfil the said request of Tumkur people ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) Public support backing up their request is awaited and the inclusion of in the Second Five-Year Plan is under consideration.

N. E. S. Blocks for Pavagada.

Q.—278. Sri Mali MARIYAPPA (Pavagada).—

Will the Government be pleased to state :—

(*a*) whether Pavagada taluk raiyats have repeatedly requested for opening of N.E.S. Block at Pavagada ;

(*b*) whether they are prepared to concede the same this year in view of the peculiar circumstances of the said taluk ?

A.—Dr. R. NAGAN GOWDA (Minister for Agriculture).—

(*a*) Yes.

(*b*) The request is kept in view.

PANEL OF CHAIRMEN.

Mr. SPEAKER.—Under Rule 6 of the Rules of Procedure and Conduct of Business in the Mysore Legislative Assembly the following members will